crores. ಕ್ಷೇತ್ರವೈಸ್ 4-5 ಲಕ್ಷ ರೂಪಾಯಿ ಆದರೂ ನಮ್ಮಲ್ಲೆರದು ಸೇರಿ ಹತ್ತು ಕೋಟಿ ರೂಪಾಯಿ ಆಗುತ್ತದೆ. ಇದಕ್ಕೆ ದೊಡ್ಡ ಅನಾಹುತವಾಗುವುದಿಲ್ಲ. ಆಕಾಶ ಕಳಚಿ ಬೀಳುವುದಿಲ್ಲ. ದಯವಿಟ್ಟು direction ಕೊಡಿ. ಶಾಸಕರ ನೇತೃತ್ವದಲ್ಲಿ ಹಂಚತಕ್ಕಂಥ ವ್ಯವಸ್ಥೆ ಆಗಲಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಅಧ್ಯಕ್ಷರೆ, ತಾವು ಮನಸ್ಸು ಮಾಡಿದರೆ, ಆಗುತ್ತದೆ. ಏಕೆಂದರೆ, ನಿಮ್ಮ ಮಾತನ್ನು ಸರ್ಕಾರದವರು ಕೇಳುತ್ತಾರೆ.

ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ.

ಶ್ರೀ ಎಸ್.ಎನ್.ಕೃಷ್ಣಯ್ಯಶೆಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ನೀಡಿರುವ ಸಲಹೆ ಕಾನೂನು ಪ್ರಕಾರ ಇದೆಯೇ ಎಂದು ಪರಿಶೀಲನೆ ಮಾಡಿ ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಏನಿದೆ? ಭೂ ಸುಧಾರಣೆ ಕಾನೂನಿನಲ್ಲಿ ಒಬ್ಬ ಶಾಸಕ ಮತ್ತು ಒಬ್ಬ non-official member, decides particularly about that land. ಒಂದು ಕೋರ್ಟಿನ ಕೆಲಸವನ್ನು ಒಬ್ಬ ಶಾಸಕ ಅಲ್ಲಿ ಮಾಡುತ್ತಾನೆ. ಆದ್ದರಿಂದ, ಇದರಲ್ಲಿ ಅಂಥದ್ದು ಏನಿದೆ?

ಶ್ರೀ ಎಸ್.ಎನ್.ಕೃಷ್ಣಯ್ಯಶೆಟ್ಟಿ: ಕಮಿಟಿ ಮಾಡುವ ಬಗ್ಗೆ ಕೊಟ್ಟಿರುವ ಸಲಹೆಗೆ ಸಂಬಂಧಪಟ್ಟಂತೆ ಹೇಳಿದ್ದೇನೆ.

ಡಾ:ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಯಾವ ಸದಸ್ಯರು ಬೇಕೆಂಬುದರ ಬಗ್ಗೆ ಇವತ್ತೇ ಮಾನ್ಯ ಶಾಸಕರುಗಳು ಪಟ್ಟಿ ಕೊಡಲಿ. ಇದಕ್ಕೆ ಸಂಬಂಧಪಟ್ಟಂತೆ ನೋಟಿಫಿಕೇಷನ್ ಬರುವುದಕ್ಕೆ ಮುಂಚೆಯೇ ಶಾಸಕರ ಅಧ್ಯಕ್ಷತೆಯಲ್ಲಿರುವ ಆರಾಧನ ಸಮಿತಿಗೆ ನಾವು ಕೊಟ್ಟಿರುವ ಹಣವನ್ನು ಖರ್ಚು ಮಾಡುವುದಕ್ಕೆ ನಾಳೆದಿವಸವೇ ಆದೇಶವನ್ನು ಹೊರಡಿಸುತ್ತೇವೆ.

(ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಎಸ್.ಸುರೇಶ್ ಕುಮಾರ್: (ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ:25.02.2009ರಂದು 03ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 98 ಪ್ರಶ್ನೆಗಳ ಪೈಕಿ 79 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.